ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಣ್ಣೆ ಸ್ಥಳ ಖಾಯಂ ಕುರಿತು

೧೦೫. ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಂದಾಯ ಜಮೀನು ಅಣ್ಣೆದಾರರ ಅಣ್ಣೆ ಸ್ಥಳ ಖಾಯಂ ಕುರಿತು ಸರ್ಕಾರ ಮಂಜೂರಾತಿ ನೀಡಲು ಏನು ಕ್ರಮ ಕೈಗೊಂಡಿದೆ ?

ಆ) ಕಳೆದ ೩–೪ ಅಧಿವೇಶನಗಳಲ್ಲಿ ಅಣ್ಣೆದಾರರ ಅಣ್ಣೆ ಖಾಯಂ ಮಂಜೂರಾತಿ ನೀಡುವುದಾಗಿ ಹೇಳುತ್ತಾ ಬಂದರೂ, ಈ ತನಕ ಕ್ರಮ ಕೈಗೊಳ್ಳದೆ ಇರಲು ಕಾರಣವೇನು ?

ಇ) ಈಗಲಾದರೂ ಸರ್ಕಾರ ಈ ಬಗ್ಗೆ ಕ್ರಮ ಕೈಗೊಳ್ಳುವುದೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿಗಳು).—

ಅ) ಆ) ಮತ್ತು ಇ) ೧೯೬೪ರ ಭೂ ಕಾಯಿದೆ ಮಸೂದೆಯ ಸೆಕ್ಷನ್ ೯೪ಕ್ಕೆ ತಿದ್ದುಪಡಿ ಮಾಡುವ ಸಲುವಾಗಿ ಕರಡು ಮಸೂದೆಯನ್ನು ಸದನದಲ್ಲಿ ಮಂಡಿಸಲಾಗಿದೆ. ಸದನವು ಅದಕ್ಕೆ ಒಪ್ಪಿಗೆ ಕೊಟ್ಟ ನಂತರ ಆ ಪ್ರಕಾರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಕರ್ನಾಟಕದಲ್ಲಿ ಸಕ್ಕರೆ ಕಾರ್ಖಾನೆಗಳು

೭೮. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಎಷ್ಟು ಸಹಕಾರ ಸಕ್ಕರೆ ಕಾರ್ಖಾನೆಗಳು ಇವೆ.

ಆ) ಇವುಗಳಲ್ಲಿ ಎಷ್ಟು ಸಕ್ಕರೆ ಕಾರ್ಖಾನೆಗಳು ಕಾರ್ಯನಿರ್ವಹಿಸುತ್ತಿವೆ.

ಇ) ಎಷ್ಟು ಮುಚ್ಚಲ್ಪಟ್ಟಿವೆ ಹಾಗೂ ಎಷ್ಟು ಕಾರ್ಖಾನೆಗಳನ್ನು ಮಾರಿದ್ದಾರೆ.

ಈ) ಇದರಿಂದ ಎಷ್ಟು ಕಾರ್ಮಿಕರು ನಿರುದ್ಯೋಗಿಗಳಾಗಿದ್ದಾರೆ ?

ಉ) ನಿರುದ್ಯೋಗಿಗಳಾದ ಕಾರ್ಮಿಕರಿಗೆ ಉದ್ಯೋಗ ಆಧಾರ ಪರಿಹಾರ ಕೊಡಲಾಗಿದೆಯೇ ?

ಶ್ರೀ ಹೆಚ್. ಏಕಾಂತಯ್ಯ (ಸಹಕಾರ ಮಂತ್ರಿಗಳು),—

ಅ) ೧೬.

ಆ) ೧೪.

ಇ) ಮುಚ್ಚಲ್ಪಟ್ಟಿರುವ ಸಕ್ಕರೆ ಕಾರ್ಖಾನೆ ... ೨
ಮಾರಿರುವ ಸಕ್ಕರೆ ಕಾರ್ಖಾನೆಗಳು ... ೧
ಮಾರಲು ತೀರ್ಮಾನಿಸಿರುವ ಕಾರ್ಖಾನೆ ... ೧

ಈ) ಸುಮಾರು ೧೫೦೦ ಮಂದಿ ಕಾರ್ಮಿಕರು ನಿರುದ್ಯೋಗಿಗಳಾಗಿದ್ದಾರೆ.

ಉ) ನಿರುದ್ಯೋಗಿಗಳಾದ ಕಾರ್ಮಿಕರಿಗೆ ಉದ್ಯೋಗ ಆಧಾರ ಪರಿಹಾರ ಕೊಡಲಾಗಿದೆ.

ಭೂ ಸುಧಾರಣಾ ನ್ಯಾಯ ಮಂಡಳಿ ಬಗ್ಗೆ

೫೦೮. ಶ್ರೀಮತಿ ಸುಮಾ ವಸಂತ್ (ವಿರಾಜಪೇಟೆ).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಭೂ ಸುಧಾರಣಾ ನ್ಯಾಯ ಮಂಡಳಿ ಕೊಡಗು ಜಿಲ್ಲೆ, ಕಾರ್ಯಾರಂಭದ ದಿನದಿಂದ ದಾಖಲಾತಿಯಾದ ಪ್ರಕರಣಗಳೆಷ್ಟು ?

ಅ) ಆವುಗಳಲ್ಲಿ ಭೂ ಮಾಲೀಕರ ಮತ್ತು ಗೇಣಿದಾರರ ಪರವಾಗಿ ಇತ್ಯರ್ಥವಾದ ಪ್ರಕರಣಗಳೆಷ್ಟು (ವಿವರ ನೀಡತಕ್ಕದ್ದು) ?

ಇ) ಕೊಡಗು ಜಿಲ್ಲೆಯ ತಾಲ್ಲೂಕು ಭೂ ನ್ಯಾಯಂ ಮಂಡಳಿಗಳಲ್ಲಿ ೩ ವರ್ಷದಿಂದ ಇತ್ಯರ್ಥವಾಗದೇ ಇರುವ ಪ್ರಕರಣಗಳೆಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು).—

ಅ) ಗೇಣಿದಾರರ ಪರವಾಗಿ ... ೪೭
ಭೂ ಮಾಲೀಕರ ಪರವಾಗಿ ... ೮೩
ಇತರೆ ... ೪೨

ಒಟ್ಟು ೧೭೨

ಇ) ಮಡಿಕೇರಿ ... ೧೭೨೩
ವೀರಾಜಪೇಟೆ ... ೧೮೪೧
ಸೋಮವಾರಪೇಟೆ ... ೧೯೩೬

ಒಟ್ಟು ೫೯೩೬

Hostels for SCs and STs in the State

148. SMT. MANORAMA MADHWARAJ (Udupi).—Will the Minister for social Welfare and pleased to State.

a) the total number of scheduled castes and scheduled tribe hostels in the State and the number of new hostels proposes for 1988–89 (District-Wise with number of inmates id each hostel be furnished) ;

b) the total number of scheduled castes and scheduled tribes Ladies hostels in the State and the Number of new hostels proposed to be constructed in 1988–89 (District-wise details may be given).

SRI G. BASAVANNAPPA (Social Welfare Minister).—

a) 1027. There is a proposal for Starting of 50 hostels for SCs students during 1987–88, and these hostels will be started during 1988–89 (District-wise list enclosed).

b) 218. There is a proposal for construction of 16 prematric SC Girls hostels during 1988–89 (District-wise list enclosed).